ಭಾನುವಾರದ ಹವಾಮಾನ

33° 22°
ಗರಿಷ್ಠ ಕನಿಷ್ಠ

**ಹವಾಮಾನ ಮುನ್ಸೂಚನೆ**
ನಗರದಲ್ಲಿ ಮಳೆ ಸಾಧ್ಯತೆ. ಬೆಂಗಳೂರಿನಿಂದ ಮೈಸೂರು, ಮಂಗಳೂರು, ಬೆಳಗಾವಿ ಮತ್ತು ಕಲಬುರ್ಗಿ ಹೆದ್ದಾರಿಯ ಅಲ್ಲಲ್ಲಿ ಗುಡುಗು ಸಹಿತ ಮಳೆ ಆಗುವ ಸಾಧ್ಯತೆ.

ಹವಾಮಾನ

| ಸೋಮವಾರ | ಮಂಗಳವಾರ | ಬುಧವಾರ |
|---|---|---|
| 33° 22° | 34° 22° | 35° 23° |

ಸೂರ್ಯೋದಯ: 5:56 ಸೂರ್ಯಾಸ್ತ : 6:36 ಚಂದ್ರೋದಯ: ಬೆ. 7:19 ಚಂದ್ರಾಸ್ತ: ರಾ.8:20

ಶನಿವಾರದ ಹವಾಮಾನ : ಗರಿಷ್ಠ 34.6° ಕನಿಷ್ಠ 21°

ಪ್ರಜಾವಾಣಿ

# ಕಣಿವೆ ಒತ್ತುವರಿ: ವರ್ತೂರು ಕೆರೆ ಅಸ್ತಿತ್ವಕ್ಕೆ ಕುತ್ತು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಳ್ಳಂದೂರು ಕೆರೆ ಹಾಗೂ ವರ್ತೂರು ಕೆರೆಗಳಿಗೆ ಸಂಪರ್ಕ ಕಲ್ಪಿಸುವ ಬೆಳ್ಳಂದೂರು ಅಮಾನಿಕೆರೆ ಭಾಗದಲ್ಲಿ ವ್ಯಾಪಕ ಪ್ರಮಾಣದಲ್ಲಿ ಒತ್ತುವರಿ ಆಗಿದೆ. ಬಫರ್ ಝೋನ್‌ನಲ್ಲಿ ಕಟ್ಟಡ ನಿರ್ಮಾಣ ಮಾಡಿ ಎಲ್ಲ ನಿಯಮಗಳನ್ನು ಗಾಳಿಗೆ ತೂರಲಾಗಿದೆ.


ಕೆರೆಯಂಚಿನಲ್ಲಿ ಕಟ್ಟಡ ಕಾಮಗಾರಿಗಳಿಗೆ ಅನುಮತಿ ನೀಡಬಾರದು ಎಂದು ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ನಾಲ್ಕು ದಿನಗಳ ಹಿಂದೆ ನಿರ್ದೇಶನ ನೀಡಿದೆ.

ಕೆರೆಗೆ ಸೇರಿದ ಜಾಗದಲ್ಲಿ ಎಲ್ಲೆಂದರಲ್ಲಿ ಕಟ್ಟಡದ ತ್ಯಾಜ್ಯ ಹಾಗೂ ಮಣ್ಣು ಸುರಿಯಲಾಗಿದೆ. ಇದರಿಂದಾಗಿ ವರ್ತೂರು ಕೆರೆಗೆ ಕತ್ತು ಹಿಸುಕಿದಂತಾಗಿದೆ.

ಕೆರೆಗೆ ಸೇರಿದ ಜಾಗದ ಸುತ್ತ ಕೆರೆ ಅಭಿವೃದ್ಧಿ ಪ್ರಾಧಿಕಾರವು ಕೆಲವು ತಿಂಗಳ ಹಿಂದೆ ಬೇಲಿ ಹಾಕಿತ್ತು. ಬೇಲಿಯ ಸುತ್ತಮುತ್ತ ಈಗ ಮಣ್ಣು ಸುರಿಯಲಾಗುತ್ತಿದೆ. ವರ್ತೂರು ಕಣಿವೆಗೆ ಸೇರಿದ ಹತ್ತಾರು ಎಕರೆ ಜಾಗವನ್ನು ಕಬಳಿಸಲಾಗಿದೆ. ಕೆಲವು ದಿನಗಳ ಹಿಂದೆ ಹಸಿರಿನಿಂದ ಕಂಗೊಳಿಸುತ್ತಿದ್ದ ಕೃಷಿಭೂಮಿಗಳು ಕಣ್ಮರೆಯಾಗಿವೆ. ಈಗ ಮಣ್ಣಿನ ರಾಶಿಯೇ ಕಾಣುತ್ತಿದೆ. ತ್ಯಾಜ್ಯ ಹಾಗೂ ಮಣ್ಣು ಸುರಿದ ಕಾರಣ ಹಲವು ಕಡೆಗಳಲ್ಲಿ ಬೇಲಿಗಳೇ ನಾಪತ್ತೆಯಾಗಿವೆ.

ಆರಂಭದಲ್ಲಿ ಸ್ಥಳೀಯ ಕೃಷಿಕರಿಗೆ ಸೇರಿದ ಜಾಗದಲ್ಲಿ ಮಣ್ಣು ಸುರಿಯಲಾಗುತ್ತಿತ್ತು. ಈ ಜಾಗದಲ್ಲಿ ಎಂಟು ಅಡಿಗಳಷ್ಟು ಎತ್ತರಕ್ಕೆ ಮಣ್ಣು ಹಾಕಲಾಯಿತು. ಬಳಿಕ ಒತ್ತುವರಿದಾರರ ಕಣ್ಣು ಕೆರೆಗೆ ಸೇರಿದ ಜಾಗದ ಮೇಲೆ ಬಿತ್ತು. ಅಕ್ಕಪಕ್ಕದಲ್ಲಿ ಮಣ್ಣು ಹೇರಿದ್ದರಿಂದ ಈಗ ಬೇಲಿಯೇ ಕಾಣುತ್ತಿಲ್ಲ ಎಂದು ಸ್ಥಳೀಯರು ದೂರುತ್ತಾರೆ.

| ಕೆರೆ | ಬೈಯಪ್ಪನಹಳ್ಳಿ | ಹರಳೂರು | ಕಸವನಹಳ್ಳಿ | ಕೈಕೊಂಡನಹಳ್ಳಿ | ದೊಡ್ಡನೆಕ್ಕುಂದಿ | ವಿಭೂತಿಪುರ | ಕುಂದಲಹಳ್ಳಿ | ಚಿನ್ನಪ್ಪನಹಳ್ಳಿ | ವರ್ತೂರು |
|---|---|---|---|---|---|---|---|---|---|
| ಹಾಲಿ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | 3.23 | 5.16 | 8.91 | 27.09 | 47.08 | 30.20 | 10.48 | 56.80 | 180.40 |




ಬೆಳ್ಳಂದೂರು ಹಾಗೂ ವರ್ತೂರು ಕೆರೆಗೆ ಸಂಪರ್ಕ ಕಲ್ಪಿಸುವ ಕಣಿವೆ. ಕೆಂಪಗಿರುವ ಪ್ರದೇಶ ಒತ್ತುವರಿಯಾಗಿರುವುದು.

'ಕೆರೆಯ ಗಡಿಯನ್ನು ನಾಮಾವಶೇಷ ಮಾಡಿ ಕಬಳಿಸುವ ಉದ್ದೇಶದಿಂದ ಈ ರೀತಿ ಮಾಡಲಾಗುತ್ತಿದೆ. ದೊಡ್ಡ ಅಪಾರ್ಟ್‌ಮೆಂಟ್ ಯೋಜನೆಯೊಂದು ಸಮೀಪದಲ್ಲಿ ಬರುತ್ತಿದೆ. ಅಲ್ಲಿ ತೆಗೆದ ಮಣ್ಣನ್ನು ಕಣಿವೆ ಪ್ರದೇಶದಲ್ಲಿ ಹಾಕಲಾಗುತ್ತಿದೆ. ಶಾಸಕರು, ಸ್ಥಳೀಯ ರಾಜಕಾರಣಿಗಳು ಹಾಗೂ ಕೆಲವು ಬಿಲ್ಡರ್‌ಗಳು ಈ ಅಕ್ರಮದ ಹಿಂದೆ ಇದ್ದಾರೆ' ಎಂದು ವರ್ತೂರು ಕೆರೆ ಉಳಿಸಲು ಹೋರಾಟ ನಡೆಸುತ್ತಿರುವ ಸ್ಥಳೀಯರು ಹಾಗೂ ಹೋರಾಟಗಾರರು ಆರೋಪಿಸುತ್ತಾರೆ.

**30 ಎಕರೆ ಒತ್ತುವರಿ:** ವರ್ತೂರು ಕೆರೆಯ ಒಟ್ಟು ವಿಸ್ತೀರ್ಣ 190 ಹೆಕ್ಟೇರ್ (471.43 ಎಕರೆ). ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಪ್ರಕಾರ ಕೆರೆಯ ಈಗಿನ ವಿಸ್ತೀರ್ಣ 180 ಹೆಕ್ಟೇರ್ (445.35 ಎಕರೆ). ಕೆರೆಯ ದಂಡೆಯಲ್ಲಿ ರಸ್ತೆಗಳು ಹಾಗೂ ಕಟ್ಟಡಗಳ ನಿರ್ಮಾಣ ಆಗಿವೆ. ಕೃಷಿ ಹಾಗೂ ತೋಟಗಾರಿಕಾ ಉದ್ದೇಶಗಳಿಗಾಗಿ ಕೆಲವು ಸ್ಥಳೀಯರು ಕೆರೆಯನ್ನು ಒತ್ತುವರಿ ಮಾಡಿದ್ದಾರೆ. ಒಟ್ಟು 12.4 ಹೆಕ್ಟೇರ್ (30.64 ಎಕರೆ) ಒತ್ತುವರಿಯಾಗಿದೆ.

'ಒತ್ತುವರಿಯಿಂದಾಗಿ ಕೆರೆಗಳ ನಡುವಿನ ಅಂತರ್‌ಸಂಪರ್ಕಕ್ಕೆ ಪೆಟ್ಟು ಬಿದ್ದಿದೆ. ಕೆರೆಯ ಜಲಾನಯನ ಪ್ರದೇಶದ ಸ್ವರೂಪವೇ ಬದಲಾಗಿದೆ. ರಾಜಕಾಲುವೆಗಳಲ್ಲಿ ಮಳೆ ನೀರಿನ ಸರಾಗ ಹರಿವಿಗೆ ಅಡ್ಡಿಯಾಗಿದೆ. ಇದರಿಂದಾಗಿ ಕೆರೆಗೆ ಮಳೆ ನೀರು ಸೇರುತ್ತಿಲ್ಲ. ಮನೆಗಳಿಗೆ ಮಳೆ ನೀರು ನುಗ್ಗಿ ಅವಘಡ ಸಂಭವಿಸುತ್ತಿದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ಅಧ್ಯಯನ ವರದಿ ತಿಳಿಸಿದೆ.

ಕೆರೆಯ ಸಂರಕ್ಷಣೆಗೆ ಕ್ರಮ ಕೈಗೊಳ್ಳದಿದ್ದರೆ ಆಪತ್ತು ಕಟ್ಟಿಟ್ಟ ಬುತ್ತಿ ಎಂದೂ ಭಾರತೀಯ ವಿಜ್ಞಾನ ಸಂಸ್ಥೆ ತನ್ನ ವರದಿಯಲ್ಲಿ ಎಚ್ಚರಿಸಿದೆ.

## ಕೆರೆಯಂಗಳದಿಂದ...

**ನೀವೂ ಮಾಹಿತಿ ನೀಡಿ** 3

ನಗರದ ಕೆರೆಗಳ ಹಾಗೂ ರಾಜಕಾಲುವೆ ಸುತ್ತ ತಲೆ ಎತ್ತಿರುವ ಕಟ್ಟಡಗಳನ್ನು ನಿರ್ದಾಕ್ಷಿಣ್ಯವಾಗಿ ಕೆಡವಬೇಕು ಎಂದು ಹಸಿರು ನ್ಯಾಯಮಂಡಳಿ ಆದೇಶ ಹೊರಡಿಸಿದೆ. ನಗರದ ಹತ್ತಾರು ಕೆರೆಗಳ ಮೇಲೆ ಭೂಮಾಫಿಯಾಗಳು, ಬಿಲ್ಡರ್‌ಗಳ ಕಣ್ಣು ಬಿದ್ದು ಕೆರೆಗಳು ಮಾಯವಾಗಿವೆ. ಕೆರೆ, ರಾಜಕಾಲುವೆ ಒತ್ತುವರಿ ಮಾಡಿರುವವರ ಬಗ್ಗೆ ಸಾರ್ವಜನಿಕರು ಪೂರಕ ದಾಖಲೆಗಳೊಂದಿಗೆ 'ಪ್ರಜಾವಾಣಿ'ಗೆ ಮಾಹಿತಿ ನೀಡಬಹುದು. ಅವುಗಳನ್ನು ಪ್ರಕಟಿಸುತ್ತೇವೆ. ಮಾಹಿತಿ ನೀಡಲು 080-25880607, 25880643, 9916240432, 9740231381 ಸಂಪರ್ಕಿಸಬಹುದು. ವಾಟ್ಸ್ ಆ್ಯಪ್ ಮೂಲಕವೂ ದಾಖಲೆ ಕಳಿಸಬಹುದು **ಇಮೇಲ್ ವಿಳಾಸ:** bangalore@prajavani.co.in




**ಅಂಕಿ ಅಂಶಗಳು**
ಎಕರೆಗಳಲ್ಲಿ

**471.43**
ವರ್ತೂರು ಕೆರೆಯ ವಿಸ್ತೀರ್ಣ

**30.64**
ಕೆರೆಯ ಒತ್ತುವರಿ



10 ಚಕ್ರದ ಟ್ರಕ್‌ನಲ್ಲಿ ಕೆರೆಯಂಗಳದಲ್ಲಿ ಮಣ್ಣು ಸುರಿಯಲಾಗುತ್ತಿದೆ.





ಪ್ರಸ್ತುತ ಈ ಭಾಗದಲ್ಲಿ ಒತ್ತುವರಿ ಆಗುತ್ತಿದೆ. ಕೆರೆ ಅಭಿವೃದ್ಧಿ ಪ್ರಾಧಿಕಾರ ಹಾಕಿರುವ ಬೇಲಿಯ ಸುತ್ತ ಮಣ್ಣು ಹಾಕಿರುವುದು

# ₹587 ಕೋಟಿ ಮೌಲ್ಯದ ಸರ್ಕಾರಿ ಭೂಮಿ ವಶ

## ಕುಂದಹಳ್ಳಿ, ಬೆಳ್ಳಂದೂರು ಅಮಾನಿ ಕೆರೆ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬೆಂಗಳೂರು ನಗರ ಜಿಲ್ಲಾಡಳಿತವು ನಾಲ್ಕು ತಾಲ್ಲೂಕುಗಳಲ್ಲಿ ಕಾರ್ಯಾಚರಣೆ ನಡೆಸಿ ₹587.50 ಕೋಟಿ ಮೌಲ್ಯದ 62.5 ಎಕರೆ ಜಾಗವನ್ನು ಸರ್ಕಾರದ ವಶಕ್ಕೆ ಪಡೆಯಿತು.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಎಳ್ಳುಕುಂಟೆ ಗ್ರಾಮದ ಸರ್ಕಾರಿ ಸರ್ವೆ ನಂ. 18/8 ರಲ್ಲಿ 1 ಎಕರೆ ಖರಾಬು ಸೇರಿ 4 ಎಕರೆ, ತಾವರೆಕೆರೆ ಗ್ರಾಮದ ಸರ್ಕಾರಿ ಸರ್ವೆ ನಂ. 125 ರಲ್ಲಿ 29 ಎಕರೆ ವಶಕ್ಕೆ ಪಡೆಯಲಾಗಿತು. ಈ ಜಾಗಗಳ ಮಾರುಕಟ್ಟೆ ಮೌಲ್ಯ ₹ 330 ಕೋಟಿ.

ಬೆಂಗಳೂರು ಉತ್ತರ ತಾಲ್ಲೂಕಿನ ಗೆದ್ದಲಹಳ್ಳಿ ಗ್ರಾಮದ ಸರ್ಕಾರಿ ಸರ್ವೆ ನಂ. 41 ರಲ್ಲಿ 5 ಗುಂಟೆ ಸ್ವಾಧೀನಪಡಿಸಿಕೊಳ್ಳಲಾಯಿತು. ಬೆಂಗಳೂರು ಪೂರ್ವ ತಾಲ್ಲೂಕಿನ ಬೆಳ್ಳಂದೂರು ಕೆರೆ ಭಾಗದ ಅಮಾನಿ ಬೆಳ್ಳಂದೂರು ಖಾನೆ ಸರ್ವೆ ನಂ. 1 ರಲ್ಲಿ 11, ಕೆ.ಆರ್.ಪುರ ಹೋಬಳಿಯ ಕುಂದಲಹಳ್ಳಿ ಗ್ರಾಮದ ಕೆರೆ ಸರ್ವೆ ನಂ. 5 ರಲ್ಲಿ 1 ಎಕರೆಯ ಒತ್ತುವರಿ ತೆರವು ಮಾಡಲಾಯಿತು.

ಆನೇಕಲ್ ತಾಲ್ಲೂಕಿನ ಜಿಗಣಿ ಹೋಬಳಿ ತಿರುಪಾಳ್ಯ ಗ್ರಾಮದ ಸರ್ವೆ ನಂ. 30/28, 30/29, 30/30, 30/31 ರಲ್ಲಿನ ತೋಟಿ ಇನಾಂತಿ ಜಾಗ 7-28 ಎಕರೆಯನ್ನು ಒತ್ತುವರಿ ಮಾಡಿಕೊಂಡು ಮಾರಾಟ ಮಾಡಲಾಗಿತ್ತು. ಅದನ್ನು ವಶಕ್ಕೆ ಪಡೆಯಲಾಗಿದೆ. ಈ ಜಾಗದ ಮೌಲ್ಯ ₹180 ಕೋಟಿ ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ವೆಂಕಟಾಚಲಪತಿ ತಿಳಿಸಿದ್ದಾರೆ.



ಆನೇಕಲ್ ತಾಲ್ಲೂಕಿನ ತಿರುಪಾಳ್ಯದಲ್ಲಿ ಜಿಲ್ಲಾಧಿಕಾರಿ ವಿ.ಶಂಕರ್ ಹಾಗೂ ಉಪ ವಿಭಾಗಾಧಿಕಾರಿ ಎಲ್.ಸಿ. ನಾಗರಾಜ್ ಅವರು ಒತ್ತುವರಿ ತೆರವು ಪರಿಶೀಲಿಸಿದರು.

## ರಾಜಕಾಲುವೆ ಹೂಳು ತೆಗೆಯಲು ಕ್ರಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಗರದಲ್ಲಿ ಮುಚ್ಚಿ ಹೋಗಿರುವ ರಾಜಕಾಲುವೆಗಳನ್ನು ಪತ್ತೆ ಹಚ್ಚಿ ಹೂಳು ತೆಗೆಯಲು ಕ್ರಮ ಕೈಗೊಳ್ಳಲಾಗುವುದು' ಎಂದು ಮೇಯರ್ ಬಿ.ಎನ್.ಮಂಜುನಾಥ್ ರೆಡ್ಡಿ ಹೇಳಿದರು.

ಶುಕ್ರವಾರ ಸಂಜೆ ಸುರಿದ ಮಳೆಯಿಂದ ಅನಾಹುತವಾಗಿರುವ ಪ್ರದೇಶಗಳಿಗೆ ವಿರೋಧ ಪಕ್ಷದ ನಾಯಕ ಪದ್ಮನಾಭ ರೆಡ್ಡಿ, ಆಡಳಿತ ಪಕ್ಷದ ನಾಯಕ ಆರ್.ಎಸ್.ಸತ್ಯನಾರಾಯಣ ಹಾಗೂ ಹಿರಿಯ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ರಾಜಕಾಲುವೆಗಳು ಸುಸಜ್ಜಿತವಾಗಿದ್ದರೆ ಮಳೆಗಾಲದಲ್ಲಿ ಅನಾಹುತಗಳು ಉಂಟಾಗುವುದಿಲ್ಲ. ಆದ್ದರಿಂದ ರಾಜಕಾಲುವೆಯಲ್ಲಿ ಹೂಳು ತುಂಬಿರುವ ಪ್ರದೇಶವನ್ನು ಪತ್ತೆ ಮಾಡುವಂತೆ ಈಗಾಗಲೇ ಅಧಿಕಾರಿಗಳಿಗೆ ಸೂಚಿಸಿರುವೆ' ಎಂದು ಹೇಳಿದರು.

ಪರಿಶೀಲನೆ ವೇಳೆ ಅನೇಕ ಕಡೆಗಳಲ್ಲಿ ರಸ್ತೆ ಗುಂಡಿಗಳು, ಹೂಳು ತುಂಬಿದ ಮೋರಿಗಳನ್ನು ನೋಡಿದ ಮೇಯರ್ ಅವರು ವಾರ್ಡ್ ಇಂಜಿನಿಯರಗಳನ್ನು ತರಾಟೆಗೆ ತೆಗೆದುಕೊಂಡರು.

# ಬೀನ್ಸ್ ಕೆ.ಜಿ.ಗೆ ₹ 150–175: ಗ್ರಾಹಕರಿಗೆ ತಟ್ಟಿದ ಬಿಸಿ

• ಎನ್. ನವೀನ್ ಕುಮಾರ್

**ಬೆಂಗಳೂರು:** ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯಿಂದಾಗಿ ತರಕಾರಿಗಳ ಉತ್ಪಾದನೆ ಕುಂಠಿತಗೊಂಡಿದ್ದು, ಬೆಲೆಯಲ್ಲಿ ಗಣನೀಯವಾಗಿ ಏರಿಕೆ ಕಂಡಿದೆ.

ಬೀನ್ಸ್ ದರ ದಾಖಲೆ ಪ್ರಮಾಣದಲ್ಲಿ ಏರಿಕೆಯಾಗಿದೆ. ಕಳೆದ ವಾರ ಕೆ.ಜಿ.ಗೆ ₹ 60 ಇದ್ದ ಬೀನ್ಸ್ ಬೆಲೆ ಈಗ ₹ 150–175 ಏರಿಕೆಯಾಗಿದೆ. ಬೆಂಡೆಕಾಯಿ ₹ 20ರಿಂದ ₹70ಗೆ, ಬಿಳಿ ಬದನೆ ₹12ರಿಂದ ₹40ಗೆ, ಗೋರಿಕಾಯಿ ₹ 20ರಿಂದ ₹40ಗೆ ಏರಿಕೆಯಾಗಿದೆ. ಆದರೆ, ಈರುಳ್ಳಿ, ಬೆಳ್ಳುಳ್ಳಿ ಬೆಲೆಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಈರುಳ್ಳಿ ಕೆ.ಜಿ.ಗೆ ₹ 15ರಿಂದ 20 ಇದೆ. ಬೆಳ್ಳುಳ್ಳಿ ಕೆ.ಜಿ.ಗೆ ₹ 80 ಇದೆ.

'ತರಕಾರಿ ಬೆಳೆಯುವ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿ ಬರ ಪರಿಸ್ಥಿತಿ ತಲೆದೋರಿದೆ. ಹೀಗಾಗಿ ರೈತರು ತರಕಾರಿಗಳನ್ನು ಬೆಳೆಯುತ್ತಿಲ್ಲ. ಬೇಡಿಕೆಗೆ ಅನುಗುಣವಾಗಿ ತರಕಾರಿಗಳು ಮಾರುಕಟ್ಟೆಗೆ ಬರುತ್ತಿಲ್ಲ' ಎಂದು ಕೆ.ಆರ್. ಮಾರುಕಟ್ಟೆಯ ವ್ಯಾಪಾರಿ ರಶೀದ್ 'ಪ್ರಜಾವಾಣಿ'ಗೆ ತಿಳಿಸಿದರು.



'ಕೆ.ಆರ್.ಮಾರುಕಟ್ಟೆಗೆ ಪ್ರತಿದಿನ 400ರಿಂದ 500 ಬೀನ್ಸ್ ಮೂಟೆಗಳು ಬರುತ್ತಿದ್ದವು. ಈಗ 50 ಮೂಟೆಗಳು ಬರುವುದೇ ಹೆಚ್ಚು. ಅಲ್ಲದೆ, ಈಗ ಮದುವೆಗಳು ಹೆಚ್ಚಾಗಿ ನಡೆಯುತ್ತಿರುವುದರಿಂದ ತರಕಾರಿಗಳಿಗೆ ಬೇಡಿಕೆ ಹೆಚ್ಚಾಗಿದೆ. ಕೇರಳದಲ್ಲಿ ತರಕಾರಿಗಳಿಗೆ ವಿಪರೀತ ಬೇಡಿಕೆ ಇದೆ. ಇಲ್ಲಿನ ತರಕಾರಿಗಳನ್ನು ಕೇರಳಕ್ಕೆ ಸರಬರಾಜು ಮಾಡಲಾಗುತ್ತಿದೆ. ಇದೂ ಬೆಲೆ ಏರಿಕೆಗೆ ಕಾರಣ' ಎಂದರು.

'ಅಡುಗೆ ಮಾಡಲು ತರಕಾರಿಗಳು ಬೇಕೇಬೇಕು. ಬೆಲೆ ಏರಿಕೆ ಆದರೂ ತೆಗೆದುಕೊಳ್ಳಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಬೀನ್ಸ್ ಬೆಲೆ ಕೇಳಿ ದಂಗಾದೆ' ಎಂದು ಸುಂಕದಕಟ್ಟೆಯ ನಿವಾಸಿ ಲತಾ ಅವರು ಹೇಳಿದರು.

**ತರಕಾರಿಗಳ ದರ** (ಪ್ರತಿ ಕೆ.ಜಿ.ಗೆ ಬೆಲೆ ₹ಗಳಲ್ಲಿ)

| ತರಕಾರಿಗಳು | ಕೆ.ಆರ್.ಮಾರುಕಟ್ಟೆ | | ಹಾಪ್‌ಕಾಮ್ಸ್ |
|---|---|---|---|
| | ಈ ವಾರ | ಹಿಂದಿನ ವಾರ | ಈ ವಾರ |
| ಬೀನ್ಸ್ | 120-150 | 60 | 148 |
| ಬೆಂಡೆಕಾಯಿ | 40 | 20 | 66 |
| ಹೀರೆಕಾಯಿ | 40 | 20 | 46 |
| ಬೀಟ್‌ರೂಟ್ | 40 | 10 | 35 |
| ಕ್ಯಾರೆಟ್ | 40 | 20 | 45 |
| ಮೂಲಂಗಿ | 40 | 30 | 36 |
| ದುಂಡು ಬದನೆ | 30 | 20 | 27 |
| ಹಾಗಲಕಾಯಿ | 60 | 10 | 54 |
| ಟೊಮೆಟೊ | 50 | 30 | 44 |
| ಈರುಳ್ಳಿ | 15-20 | 15 | 38 |
| ತೊಂಡೆಕಾಯಿ | 40 | 30 | 34 |
| ನವಿಲುಕೋಸು | 80 | 60 | 48 |
| ಎಲೆಕೋಸು | 40 | 30 | 20 |
| ಹಸಿಮೆಣಸಿನ ಕಾಯಿ | 80 | 60 | 75 |
| ಕ್ಯಾಪ್ಸಿಕಂ | 60 | 30 | 60 |
| ಪಡವಲ ಕಾಯಿ | 30 | 20 | 32 |
| ಬಟಾಣಿ | 400 | 250-300 | - |










ನೀರಿನೊಳಗೆ ಸಂಚರಿಸುವ ವಾಹನವನ್ನು ವಿದ್ಯಾರ್ಥಿಗಳು ಪ್ರದರ್ಶಿಸಿದರು

# ವಿದ್ಯಾರ್ಥಿಗಳು ತಯಾರಿಸಿದ 4 ವಾಹನಗಳ ಪ್ರದರ್ಶನ

**ಬೆಂಗಳೂರು:** ನಗರದ ಸಾಯಿರಾಮ್ ಎಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು ರೂಪಿಸಿರುವ 'ಅಶ್ವ', 'ವರುಣ', 'ಮೆಹ್ರಾಕ್ಸ್', 'ಇ–ಬೈಕ್'ಗಳನ್ನು ಶುಕ್ರವಾರ ಪ್ರದರ್ಶಿಸಲಾಯಿತು.

ನಗರದ ಪ್ರೆಸ್‌ಕ್ಲಬ್ ಬಳಿ ವಾಹನಗಳನ್ನು ಪ್ರದರ್ಶನಕ್ಕಿಡಲಾಗಿತ್ತು. ವಿನೂತನ ವಾಹನಗಳನ್ನು ವಿನ್ಯಾಸಗೊಳಿಸಿದ ವಿದ್ಯಾರ್ಥಿಗಳು, ಕಾಲೇಜಿನ ಆಡಳಿತ ಮಂಡಳಿ ಸದಸ್ಯರು ಹಾಜರಿದ್ದರು.

ಕಾಲೇಜಿನ ವಿದ್ಯಾರ್ಥಿಗಳು ಸೌರ ಶಕ್ತಿಯಿಂದ ಚಲಿಸುವ 'ಅಶ್ವ' ಎಂಬ ರೇಸ್ ಕಾರನ್ನು ವಿನ್ಯಾಸಗೊಳಿಸಿದ್ದಾರೆ. ಈ ಕಾರು ತಯಾರಿಸಿದ ವಿದ್ಯಾರ್ಥಿಗಳು ಏಪ್ರಿಲ್‌ನಲ್ಲಿ ಪಂಜಾಬ್‌ನಲ್ಲಿ ನಡೆದ ರೇಸಿಂಗ್ ಇಂಡೊ ಏಷ್ಯನ್ ಸೋಲಾರ್ ವೆಹಿಕಲ್ ಚಾಲೆಂಜ್ ಸ್ಪರ್ಧೆಯಲ್ಲಿ ಭಾಗವಹಿಸಿ ರನ್ನರ್–ಅಪ್ ಸ್ಥಾನ ಪಡೆದಿದ್ದಾರೆ. ಈ ವಾಹನ ಗಂಟೆಗೆ 85 ಕಿ.ಮೀ. ವೇಗದಲ್ಲಿ ಸಂಚರಿಸಲಿದೆ ಎಂದು ಮಾಹಿತಿ ನೀಡಲಾಯಿತು.

**ವರುಣ:** ಸ್ವಯಂಚಾಲಿತವಾಗಿ ನೀರಿನೊಳಗೆ ಸಂಚರಿಸುವ 'ವರುಣ' ಎಂಬ ವಾಹನವನ್ನು ಅಭಿವೃದ್ಧಿಪಡಿಸಿದ್ದಾರೆ. ಇದು ಸಿಂಗಪುರ ಅಟಾನಮಸ್ ಅಂಡರ್‌ವಾಟರ್ ವೆಹಿಕಲ್ ಚಾಲೆಂಜ್‌ನಲ್ಲಿ ಭಾಗವಹಿಸಿದೆ.

ಮೆಹ್ರಾಕ್ಸ್ ಎಂಬ ಗೋ–ಕಾರ್ಟ್ ವಾಹನವನ್ನು ವಿಷ್ಣು ಎಂಜಿನಿಯರಿಂಗ್ ಕಾಲೇಜ್ ಫಾರ್ ವಿಮೆನ್ ಸ್ಪರ್ಧೆಯಲ್ಲಿ ಪ್ರದರ್ಶಿಸಲಾಗಿದ್ದು, ಎರಡನೇ ಸ್ಥಾನ ಪಡೆದಿದೆ.

'ರೈಡರ್ಸ್ ದಿ ಇ–ಬೈಕ್' ರೈಸಿಂಗ್ ಬೈಕ್ ಆಗಿದೆ. ಆಟೋಕ್ರಾಸ್ ಸ್ಪರ್ಧೆಯಲ್ಲಿ ಈ ಬೈಕ್‌ಗೆ ಎರಡನೇ ಸ್ಥಾನ ದೊರೆತಿದೆ.

ವಿದ್ಯಾರ್ಥಿಗಳ ಆವಿಷ್ಕಾರವನ್ನು ಶ್ಲಾಘಿಸಿದ ಸಾಯಿರಾಮ್ ಎಂಜಿನಿಯರಿಂಗ್ ಕಾಲೇಜಿನ ಅಧ್ಯಕ್ಷ ಸಾಯಿ ಪ್ರಕಾಶ್ ಲಿಯೋ ಮುತ್ತು ಅವರು ನಾಲ್ಕು ತಂಡಗಳಿಗೆ ಒಟ್ಟು ₹ 4.20 ಲಕ್ಷ ನಗದು ಬಹುಮಾನ ನೀಡಿದರು. ಈ ಪೈಕಿ ಸೋಲಾರ್ ಕಾರ್ ಅಭಿವೃದ್ಧಿಪಡಿಸಿದ ತಂಡಕ್ಕೆ ₹ 2.50 ಲಕ್ಷ ವಿತರಿಸಿದರು.

Printed and published by B A Ravi on behalf of The Printers ( Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. Editor: **K.N. Shanth Kumar**. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 25880000, Fax: 25880618, Editorial: 25880607, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited.